# ಪದೇ ಪದೇ ಕೇಳಿಬರುವ ಪ್ರಶ್ನೆಗಳು

**1. ಸ್ಕೋಲರ್ ಶಿಪ್ ಗೆ ಯಾರು ಅರ್ಜಿ ಹಾಕಬಹುದು?**

ಉ. ಸಂತೂರ್ ಸ್ಕೋಲರ್‌ಶಿಪ್ ಪದವಿ/ಡಿಪ್ಲೊಮಾ ವ್ಯಾಸಂಗದಲ್ಲಿ ಆಸಕ್ತಿಯಿರುವ ಜೀವನಾನುಕೂಲತೆಗಳಿಗಿಂತ ಮತ್ತು ಪ್ರತಿಕೂಲ ಸ್ಥಿತಿಯಲ್ಲಿರುವ ಹೆಣ್ಣುಮಕ್ಕಳಿಗಾಗಿ ತೆರೆದಿರುತ್ತದೆ. ಈ ಸ್ಕೋಲರ್‌ಶಿಪ್ ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳಲ್ಲಿ ಲಭ್ಯವಿರುತ್ತದೆ.

**2. ಸ್ಕೋಲರ್ ಶಿಪ್ ಪಡೆಯಲು ಬೇಕಾಗುವ ಅರ್ಹತೆಗಳೇನು?**

ಉ. ಸ್ಕೋಲರ್‌ಶಿಪ್ ಪಡೆಯಲು ಅರ್ಜಿದಾರಳಲ್ಲಿರಬೇಕಾದ ಅರ್ಹತೆಗಳು ಈ ಕೆಳಗಿನಂತಿವೆ:

- ಅಭ್ಯರ್ಥಿಯು/ಅರ್ಜಿದಾರಳು–ಹತ್ತನೇ ತರಗತಿಯನ್ನು ಸರ್ಕಾರಿ ಶಾಲೆಯಲ್ಲಿ ಪೂರ್ಣಗೊಳಿಸಿರಬೇಕು.
- ಹನ್ನೆರಡನೇಯ ವರ್ಗವನ್ನು/ಪಿಯುಸಿಯನ್ನು ಸರ್ಕಾರಿ ಜ್ಯೂನಿಯರ್ ಅಥವಾ ಪ್ರಥಮದರ್ಜೆ ಕಾಲೇಜಿನಲ್ಲಿ 2015–2016ರ ಶೈಕ್ಷಣಿಕ ವರ್ಷದಲ್ಲಿ ಪೂರೈಸಬೇಕು.
- ಯಾವುದೇ ಮಾನ್ಯತೆ ಹೊಂದಿರುವ ಕಾಲೇಜಿನಲ್ಲಿ 2016–2017ನೆ ವರ್ಷದ ಪೂರ್ಣಾವಧಿ ಡಿಪ್ಲೊಮಾ ತರಗತಿಗೆ ಧಾಖಲಾಗಬೇಕು/ಸೇರಿಕೊಂಡಿರಬೇಕು.
- ಕನಿಷ್ಠ ಎರಡು ವರ್ಷಗಳ ಮಾನ್ಯತೆ ಪಡೆದಿರುವ ವ್ಯಾಸಂಗಕ್ಕೆ ದಾಖಲಾಗಬೇಕು/ಸೇರಿಕೊಂಡಿರಬೇಕು.

**3. ಒಂದು ವರ್ಷದ ಡಿಪ್ಲೊಮಾ ಸೇರಲು ಬಯಸಿದರೆ ಸ್ಕೋಲರ್ ಶಿಪ್ ಸಿಗುತ್ತದೆಯೇ?**

ಉ. ಇಲ್ಲ, ಈ ಸ್ಕೋಲರ್‌ಶಿಪ್‌ಗೆ ಅರ್ಹತೆ ಪಡೆಯಲು ಕನಿಷ್ಠ ಎರಡು ವರ್ಷಗಳ ಮಾನ್ಯತೆ ಪಡೆದಿರುವ ಡಿಪ್ಲೊಮಾ ದಾಖಲಾಗಬೇಕು/ಸೇರಿಕೊಂಡಿರಬೇಕು.

**4. ಸ್ಕೋಲರ್ ಶಿಪ್‌ನ್ನು ಬೋಧನಾಶುಲ್ಕ (ಟ್ಯೂಶನ್ ಫೀ) ಭರಿಸುವುದರ ಸಲುವಾಗಿ ಉಪಯೋಗಿಸಬಹುದೇ?**

ಉ. ವಿದ್ಯಾರ್ಥಿಯು ಸ್ಕೋಲರ್‌ಶಿಪನ್ನು ಬೋಧನಾಶುಲ್ಕ ಇಲ್ಲವೇ ವ್ಯಾಸಂಗಕ್ಕೆ ಸಂಬಂಧಿಸಿದ ಇನ್ನಾವುದರದ ಖರ್ಚುಗಳನ್ನು ಭರಿಸಲು ಉಪಯೋಗಿಸಬಹುದು.

**5. ಸ್ಕೋಲರ್ ಶಿಪ್ ಸಲುವಾಗಿ ಹೇಗೆ ಅರ್ಜಿ ಹಾಕಬೇಕು?**

ಉ. ಅರ್ಹ ಅಭ್ಯರ್ಥಿಗಳು ಆಯಾ ಶಾಲೆಯ /ಕಾಲೇಜಿನ ಮುಖ್ಯಸ್ಥರ/ಪ್ರಾಂಶುಪಾಲರು ಬಳಿ ಫಾರ್ಮ್ ಪಡೆದು ಅರ್ಜಿ ಹಾಕಬಹುದು. www.santoorscholarships.com ವೆಬ್‌ಸೈಟಿನಿಂದ ಕೂಡ ಅರ್ಜಿ ಡೌನ್‌ಲೋಡ್ ಮಾಡಬಹುದು.

**6. ಸ್ಕೋಲರ್ ಶಿಪ್ ಅರ್ಜಿಯನ್ನು ಸಲ್ಲಿಸುವುದು ಹೇಗೆ?**

ಉ. ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು Wipro Cares - Santoor Scholarship, Doddakannelli, Sarjapur Road,Bangalore – 560035 ವಿಳಾಸಕ್ಕೆ ಯಾವುದೇ ಭರವಸೆಯ ಕೊರಿಯರ್ ಅಥವಾ ಅಂಚೆ ಮೂಲಕ ಕಳಿಸಬೇಕು.

**7. ಅರ್ಜಿಯೊಡನೆ ಲಗತ್ತಿಸಬೇಕಾದ ದಾಖಲೆಗಳಾವುವು?**

ಉ. ಅರ್ಜಿಯೊಡನೆ ಲಗತ್ತಿಸಬೇಕಾದ ದಾಖಲೆಗಳು ಈ ಕೆಳಗಿನಂತಿವೆ:

- ಇತ್ತೀಚಿನ ಕಲರ್ ಫೋಟೋಗಳು ಎರಡು ಪಾಸ್‌ಪೋರ್ಟ್ ಅಳತೆಯದು.
- ಅರ್ಜಿದಾರಳ ಬ್ಯಾಂಕ್ ಪಾಸ್ ಬುಕ್ಕಿನ ಮೊದಲ ಎರಡು ಪುಟಗಳ ನಕಲುಗಳು.
- ಪೋಷಕರ ಆಧಾರ್ ಕಾರ್ಡ್ ಅಥವಾ ರೇಶನ್ ಕಾರ್ಡಿನ ನಕಲು
- ಹತ್ತನೆ ತರಗತಿಯ ಪ್ರಮಾಣಪತ್ರ
- 12ನೇ ವರ್ಗ/ಇಂಟರ್/ಪಿಯುಸಿ ಪ್ರಮಾಣಪತ್ರ ಅಥವಾ ತಾತ್ಕಾಲಿಕ 12ನೇ ವರ್ಗ/ಇಂಟರ್/ಪಿಯುಸಿ ಪ್ರಮಾಣಪತ್ರ ಅಥವಾ ಹಾಲ್ ಟಿಕೆಟ್

**8. ಆನ್‌ಲೈನ್‌ನಲ್ಲಿ ಅರ್ಜಿ ಕಳಿಸಬಹುದೇ ?**

ಉ. ಇಲ್ಲ, ಆದರೆ www.santoorscholarships.com ವೆಬ್‌ಸೈಟಿನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಮುದ್ರಿತ ಪ್ರತಿಯನ್ನು ಭರ್ತಿ ಮಾಡಿ ಅಂಚೆ ಮೂಲಕ ಮೇಲೆ ತಿಳಿಸಿದ ವಿಳಾಸಕ್ಕೆ ಕಳಿಸಬಹುದು.

**9. ಅರ್ಜಿ ಹಾಕಲು ಕೊನೆಯ/ಅಂತಿಮ ದಿನಾಂಕ ಯಾವುದು?**

ಉ. ಅರ್ಜಿಗಳು ಏಪ್ರಿಲ್ 1, 2016ರ ನಂತರ ವೆಬ್‌ಸೈಟಿನಲ್ಲಿ ಲಭ್ಯವಿರುತ್ತದೆ. ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜುಲೈ 31, 2016.

**10. ಸ್ಕೋಲರ್‌ಶಿಪ್ ಪಡೆಯಲು ಯಾವುದಾದರು ಪರೀಕ್ಷೆ ಬರೆಯಬೇಕೇ?**

ಉ. ಇಲ್ಲ. ಇಲ್ಲಿ ಯಾವುದೇ ಪರೀಕ್ಷೆಯ ಅಗತ್ಯವು ಇರುವುದಿಲ್ಲ. ಆದರೆ ನಿಮ್ಮ ಅರ್ಜಿಯನ್ನು ಪರಿಗಣಿಸಲು ಪ್ರಶ್ನೆ 2 ರಲ್ಲಿ ಕೇಳಿರುವ ಎಲ್ಲಾ ಅರ್ಹತೆಗಳನ್ನೂ ಪೂರೈಸಬೇಕು.

**11. ವ್ಯಾಸಂಗ ಮುಗಿಸುವವರೆಗೂ ಸ್ಕೋಲರ್‌ಶಿಪ್ (ಹಣಕಾಸಿನ ಸಹಾಯ) ಸಿಗುತ್ತದೆಯೇ?**

ಉ. ಹೌದು. ವ್ಯಾಸಂಗದ ಅವಧಿ ಪೂರ್ಣವಾಗುವ ವರೆಗೂ ಈ ಸ್ಕೋಲರ್‌ಶಿಪ್ ಇರುತ್ತದೆ. ಆದರೆ ಧನ ಸಹಾಯ ಮುಂದುವರೆಯಲು ವ್ಯಾಸಂಗ ಮುಗಿಯುವವರೆಗೂ ಪ್ರತಿ ವರ್ಷದ ಪರೀಕ್ಷೆಯಲ್ಲಿ ಯಶಸ್ಸು ಹೊಂದಿರಬೇಕು.

**12. ಸ್ಕೋಲರ್‌ಶಿಪ್‌ನ ಮೊತ್ತ ಎಷ್ಟು?/ಎಷ್ಟು ಮೊತ್ತದ ಸ್ಕೋಲರ್‌ಶಿಪ್ ದೊರೆಯುತ್ತದೆ?**

ಉ. ಅಭ್ಯರ್ಥಿಯು ವ್ಯಾಸಂಗ ಮಾಡುತ್ತಿರುವ ಕಾಲೇಜಿನ ಸ್ಥಳವನ್ನು ಆಧರಿಸಿ ರೂ.36,000/- ಅಥವಾ ರೂ.24,000/- ವಿದ್ಯಾರ್ಥಿ ವೇತನ ನೀಡಲಾಗುವುದು.

**13. ಈ ಸ್ಕೋಲರ್‌ಶಿಪ್‌ನ ಮೊತ್ತವನ್ನು ಹೇಗೆ ಪಾವತಿಸಲಾಗುವುದು?**

ಉ. ನೇರವಾಗಿ ನಿಮ್ಮ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು.

**14. ಸ್ಕೋಲರ್‌ಶಿಪ್‌ನಲ್ಲಿ ಆಯ್ಕೆಯ ಬಗ್ಗೆ ಯಾವಾಗ ತಿಳಿಸಲಾಗುತ್ತದೆ?**

ಉ: ಸ್ಕೋಲರ್‌ಶಿಪ್ ಅರ್ಜಿಯ ಫಲಿತಾಂಶವನ್ನು ಆಗಸ್ಟ್ ಮೂರನೇ ವಾರದ ಹೊತ್ತಿಗೆ ತಿಳಿಸಲಾಗುತ್ತದೆ.

**15. ಹೆಚ್ಚಿನ ವಿವರಗಳಿಗೆ ಯಾರನ್ನು ಸಂಪರ್ಕಿಸಬೇಕು?**

ಉ. ನೀವು santoor.scholarship@wipro.com ಗೆ ಇಮೇಲ್ ಕಳಿಸಬಹುದು ಅಥವಾ +917337835166 ಕ್ಕೆ ಕರೆ ಮಾಡಬಹುದು